# ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ : ಕೇಂದ್ರ ಕಛೇರಿ : ಹುಬ್ಬಳ್ಳಿ

**ಜಾಹೀರಾತು ಸಂಃ 1/2019 ರನ್ವಯ ಚಾಲಕ ಮತ್ತು ಚಾಲಕ-ಕಂ-ನಿರ್ವಾಹಕ (ಪಜಾ-ಹಿಂಬಾಕಿ) ಹುದ್ದೆಗಳಿಗೆ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳ ಮೂಲ ದಾಖಲೆ / ದೈಹಿಕ ಅರ್ಹತೆ ಪರಿಶೀಲನೆಯನ್ನು ದಿನಾಂಕಃ 07-03-2024 ರಿಂದ ಪ್ರಾದೇಶಿಕ ತರಬೇತಿ ಕೇಂದ್ರ, ಗೋಕುಲ ರಸ್ತೆ, ಹುಬ್ಬಳ್ಳಿಯಲ್ಲಿ ಪ್ರಾರಂಭಿಸಲು ಯೋಜಿಸಲಾಗಿದೆ.**

**ಅಭ್ಯರ್ಥಿಗಳು ಮೂಲ ದಾಖಲೆ / ದೈಹಿಕ ಅರ್ಹತೆ ಪರಿಶೀಲನೆಗೆ ಹಾಜರಾಗಬೇಕಾದ ದಿನಾಂಕ / ಸಮಯ ಹಾಗೂ ಹಾಜರುಪಡಿಸಬೇಕಾದ ಮೂಲ ದಾಖಲೆಗಳ ವಿವರಗಳ ಕುರಿತು ಸಂಸ್ಥೆಯ ವೆಬ್‌ಸೈಟ್ ವಿಳಾಸ "www.nwkrtc.karnataka.gov.in" ನ್ನು ನಿರಂತರವಾಗಿ ಗಮನಿಸುವುದು.**

**ಅಭ್ಯರ್ಥಿಗಳು ಮೂಲ ದಾಖಲೆ / ದೈಹಿಕ ಅರ್ಹತೆ ಪರಿಶೀಲನೆಗೆ ಹಾಜರಾಗುವ ಸಂದರ್ಭದಲ್ಲಿ ಹಾಜರುಪಡಿಸಬೇಕಾದ ಮೂಲ ದಾಖಲೆಗಳ ವಿವರಗಳು (ಇವುಗಳ 2 ಸೆಟ್ ಝೆರಾಕ್ಸ್ ಪ್ರತಿಗಳು) :**

1) ಅರ್ಜಿ ಶುಲ್ಕವನ್ನು ಪಾವತಿ ಮಾಡಿರುವ ಕುರಿತು ಪೋಸ್ಟ್ ಆಫೀಸ್ ದೃಢೀಕರಣದ ಚಲನ್ ಪ್ರತಿ.
2) ಆನ್‌ಲೈನ್ ಮುಖಾಂತರ ಅರ್ಜಿ ಸಲ್ಲಿಸಿದಾಗ ಮುದ್ರಿಸಿಕೊಂಡ ಅರ್ಜಿ.
3) ಜನ್ಮ ದಿನಾಂಕದ ದೃಢೀಕರಣ ಕುರಿತು ಎಸ್ ಎಸ್ ಎಲ್ ಸಿ ಅಂಕಪಟ್ಟಿ / ವರ್ಗಾವಣಾ ಪ್ರಮಾಣಪತ್ರ / ಕ್ಯುಮುಲೆಟಿವ್ ರೆಕಾರ್ಡ್
4) ಅಭ್ಯರ್ಥಿಯ ಆಧಾರ ಕಾರ್ಡ ಪ್ರತಿ
5) ಎಸ್.ಎಸ್.ಎಲ್.ಸಿ / ತತ್ಸಮಾನ ವಿದ್ಯಾರ್ಹತೆಯಲ್ಲಿ ತೇರ್ಗಡೆ ಹೊಂದಿದ ಕುರಿತು ಅಂಕಪಟ್ಟಿ.
6) ಜಾತಿ, ಪ್ರವರ್ಗ / ಆದಾಯ ಪ್ರಮಾಣಪತ್ರದ ಮೂಲ ಪ್ರತಿ. ಮೀಸಲಾತಿ ಕೋರಿದ್ದಲ್ಲಿ ಪಜಾ/ಪಪಂ/ವರ್ಗ-1 / 2ಎ / 2ಬಿ / 3ಎ / 3ಬಿ ಪ್ರಮಾಣ ಪತ್ರ.
7) ಚಾಲ್ತಿಯಲ್ಲಿರುವ ಪ್ರಯಾಣಿಕರ ಭಾರಿ ವಾಹನ / ಭಾರಿ ಸರಕು ಸಾಗಾಣಿಕೆ ಚಾಲನಾ ಲೈಸೆನ್ಸ್ ಹಾಗೂ ಕರ್ನಾಟಕ ಪಿ.ಎಸ್.ವ್ಹಿ ಬ್ಯಾಡ್ಜ್ (ಭಾರಿ ವಾಹನ ಚಾಲನಾ ಪರವಾನಿಗೆ ಹೊಂದಿ 2 ವರ್ಷಗಳಾಗಿರತಕ್ಕದ್ದು) ಚಾಲನಾ ಲೈಸೆನ್ಸ ನವೀಕರಣದ ಕುರಿತು "Extract of Driving Licence" ನ್ನು ಕಡ್ಡಾಯವಾಗಿ ಹಾಜರುಪಡಿಸುವುದು.
8) ಚಾಲ್ತಿಯಲ್ಲಿರುವ ನಿರ್ವಾಹಕ ಲೈಸೆನ್ಸ್ ಹಾಗೂ ಕರ್ನಾಟಕ ಬ್ಯಾಡ್ಜ್ (ಚಾಲಕ-ಕಂ-ನಿರ್ವಾಹಕ ಹುದ್ದೆಗೆ ಅರ್ಜಿ ಸಲ್ಲಿಸಿದ್ದಲ್ಲಿ ಮಾತ್ರ)
9) ಗ್ರಾಮೀಣ ಅಭ್ಯರ್ಥಿ ಪ್ರಮಾಣ ಪತ್ರ (ಮೀಸಲಾತಿ ಬಯಸಿದ್ದಲ್ಲಿ ಮಾತ್ರ, ನಮೂನೆ-1/ನಮೂನೆ-2ರಲ್ಲಿ)(1ರಿಂದ 10ನೇ ತರಗತಿ)
10) ಕನ್ನಡ ಮಾಧ್ಯಮ ವ್ಯಾಸಂಗ ಪ್ರಮಾಣ ಪತ್ರ. (ಮೀಸಲಾತಿ ಬಯಸಿದ್ದಲ್ಲಿ ಮಾತ್ರ) (1 ರಿಂದ 10ನೇ ತರಗತಿ)
11) ಯೋಜನಾ ನಿರಾಶ್ರಿತ ಪ್ರಮಾಣ ಪತ್ರ (ಮೀಸಲಾತಿ ಬಯಸಿದ್ದಲ್ಲಿ ಮಾತ್ರ).
12) ಮಾಜಿ ಸೈನಿಕರಾಗಿದ್ದಲ್ಲಿ ಸೇವೆಯಿಂದ ಬಿಡುಗಡೆ ಹೊಂದಿದ ಪ್ರಮಾಣ ಪತ್ರ. (Discharge Certificate)
13) ಸಾರಿಗೆ ಸಂಸ್ಥೆ ಇಲಾಖಾ ಅಭ್ಯರ್ಥಿಯಾಗಿದ್ದರೆ ಸಂಬಂಧಪಟ್ಟ ನೇಮಕಾತಿ ಪ್ರಾಧಿಕಾರಸ್ಥರಿಂದ ಪಡೆದ ನಿರಾಕ್ಷೇಪಣಾ ಪತ್ರ.
14) ಅಶಕ್ತ ಮಾಜಿ ಸೈನಿಕರ ಅವಲಂಬಿತರೆಂದು ಅರ್ಜಿಶುಲ್ಕದಲ್ಲಿ ರಿಯಾಯತಿ ಪಡೆದಿದ್ದಲ್ಲಿ ಈ ಬಗ್ಗೆ ಪ್ರಮಾಣ ಪತ್ರ.

## : ಸೂಚನೆ :

1) ಎಲ್ಲಾ ಪ್ರಮಾಣ ಪತ್ರಗಳನ್ನು ಅರ್ಜಿ ಸಲ್ಲಿಸಲು ನಿಗದಿಪಡಿಸಲಾದ ಕೊನೆಯ ದಿನಾಂಕ ಅಂದರೆ ದಿನಾಂಕ : 08-01-2020 ಕ್ಕಿಂತ ಮುಂಚಿತವಾಗಿ ಪಡೆದಿರಬೇಕು.
2) ಸಾರಿಗೆ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಭ್ಯರ್ಥಿಗಳು ಮೂಲ ದಾಖಲೆಗಳನ್ನು ವಿಭಾಗದಲ್ಲಿ ಸಲ್ಲಿಸಿದ್ದಲ್ಲಿ, ಸದರಿ ದಾಖಲೆಗಳ ಛಾಯಾ ಪ್ರತಿಗಳ ಮೇಲೆ ಸಂಬಂಧಿಸಿದ ವಿಭಾಗದ ಸಹಾಯಕ / ಆಡಳಿತಾಧಿಕಾರಿಯವರಿಂದ ದೃಢೀಕರಿಸಿದ್ದಲ್ಲಿ ಮಾತ್ರ ಪರಿಗಣಿಸಲಾಗುವುದು.
3) ಮೂಲ ದಾಖಲೆಗಳ ಪರಿಶೀಲನೆಗೆ ಅಭ್ಯರ್ಥಿಗಳು ತಮ್ಮ ಸ್ವಂತ ಖರ್ಚಿನಿಂದ ಬರತಕ್ಕದ್ದು. ನಿಗದಿತ ದಿನಾಂಕ ಮತ್ತು ಸಮಯಕ್ಕೆ ಸರಿಯಾಗಿ ಮೂಲ ದಾಖಲೆ ಪರಿಶೀಲನೆಗೆ ಹಾಜರಾಗಲು ವಿಫಲರಾದಲ್ಲಿ ಮರು ಅವಕಾಶ ನೀಡುವುದಿಲ್ಲ. ಈ ವಿಷಯದಲ್ಲಿ ಮರು ಪರಿಶೀಲನೆ ಅಥವಾ ಯಾವುದೇ ಪತ್ರ ವ್ಯವಹಾರ ಮಾಡಲಾಗುವುದಿಲ್ಲ.
4) ಪ್ರಾಥಮಿಕ ಹಂತವಾಗಿ ಮೂಲ ದಾಖಲೆ ಮತ್ತು ದೈಹಿಕ ಅರ್ಹತೆಯ ಪರಿಶೀಲನೆಗಾಗಿ ಮಾತ್ರ ಕರೆಯಲಾಗಿದ್ದು, ದೈಹಿಕವಾಗಿ ಮತ್ತು ನಿಗದಿತ ವಿದ್ಯಾರ್ಹತೆಯ ದಾಖಲೆಗಳ ಪರಿಶೀಲನೆಯಲ್ಲಿ ಅರ್ಹರಾದಲ್ಲಿ ಮಾತ್ರ ಚಾಲನಾ ವೃತ್ತಿ ಪರೀಕ್ಷೆಗೆ ಒಳಪಡಿಸಲಾಗುವುದು ಹಾಗೂ ಚಾಲನಾ ವೃತ್ತಿ ಪರೀಕ್ಷೆಯ ದಿನಾಂಕವನ್ನು ನಂತರ ತಿಳಿಸಲಾಗುವುದು. ಚಾಲನಾ ವೃತ್ತಿ ಪರೀಕ್ಷೆಯ ವಿಧಾನಗಳನ್ನು ವೆಬ್‌ಸೈಟ್‌ನಲ್ಲಿ ವಿವರವಾಗಿ ನೀಡಲಾಗಿದೆ.
5) ಚಾಲನಾ ವೃತ್ತಿ ಪರೀಕ್ಷೆಯನ್ನು ಗಣಕೀಕೃತ ಚಾಲನಾ ಪಥದಲ್ಲಿ ನಡೆಸಲಾಗುವುದು. ಈ ಪ್ರಕ್ರಿಯೆಯಲ್ಲಿ ಯಾವುದೇ ರೀತಿಯ ಮಾನವ ಹಸ್ತಕ್ಷೇಪ ಇರುವುದಿಲ್ಲ. ಆದುದರಿಂದ, ಅಭ್ಯರ್ಥಿಗಳು, ಆಯ್ಕೆಗಾಗಿ ಯಾವುದೇ ತರಹದ ಶಿಫಾರಸ್ಸು / ಒತ್ತಡ ತರಬಾರದು ಹಾಗೂ ಇತರ ಆಮಿಷಗಳಿಗೆ ಒಳಗಾಗಬಾರದೆಂದು ತಿಳಿಸಲಾಗಿದೆ. ಯಾವುದೇ ತರಹದ ಲಂಚರುಷುವತ್ತುಗಳ

ಮಾಹಿತಿ / ಸಾಕ್ಷ್ಯಾಧಾರ ಇತ್ಯಾದಿಗಳನ್ನು ಬರವಣಿಗೆಯಲ್ಲಾಗಲಿ / ಖುದ್ದಾಗಿ ಒದಗಿಸಲು ಬಯಸಿದಲ್ಲಿ ಕೇಂದ್ರ ಕಛೇರಿ, ಗೋಕುಲ ರಸ್ತೆ, ಹುಬ್ಬಳ್ಳಿ ಇಲ್ಲಿಗೆ ಸಂಪರ್ಕಿಸುವುದು.

6) ಅರ್ಹರಾದ ಅಭ್ಯರ್ಥಿಗಳು ಚಾಲನಾ ವೃತ್ತಿ ಪರೀಕ್ಷೆಯಲ್ಲಿ ಪಡೆದ ಅಂಕಗಳ ಅರ್ಹತೆ ಮತ್ತು ಮೀಸಲಾತಿ ನಿಯಮಾನುಸಾರ ಆಯ್ಕೆಯನ್ನು ಮಾಡಲಾಗುವುದು.